ಮಾಡಿದೆ. ದಂಗಾಗಿ ಹೋದೆ. ಸಾಧ್ಯವಾದಷ್ಟು ಬರಲು ಪ್ರಯತ್ನಿಸುತ್ತೇನೆ ಅಂತ ರಾಜೇಶ್ ಬರೆದಿದ್ದ. ಬರುತ್ತೇನೆ ಅಂತ ಬರೆದಿರಲಿಲ್ಲ. ನಾನು ಕೂಡ ನನ್ನ ಅನುಕೂಲ ಮತ್ತು ಆಶಯಕ್ಕೆ ತಕ್ಕಂತೆ ರಾಜೇಶನ ಸಂದೇಶವನ್ನು ಓದಿಕೊಂಡಿದ್ದೆ!

ಮೂರನೆಯವನು ಗಂಡಸು. ಅವನು ಕಥೆಗಾರನ ಒಂದು ಪ್ರಸಿದ್ಧ ಪೌರಾಣಿಕ ಕಥೆಯ ರೀಮೇಕ್ ಬರಹದ ಬಗ್ಗೆ ಮಾತನಾಡಲು ಬಂದ.

ಕಥೆಗಾರ ಸಾಹಿತಿಯ ಕಡೆಗೆ ತಿರುಗಿ ನೋಡಿದೆ. ನಿರ್ಲಿಪ್ತ ಮನೋಭಾವ. ತಮಗೂ ಇದಕ್ಕೂ ಸಂಬಂಧವಿಲ್ಲ ಎನ್ನುವಂತೆ ಎತ್ತಲೋ ನೋಡುತ್ತ ಆಗಾಗ ಪಕ್ಕದ ಗೆಳೆಯರೊಡನೆ ಮಾತುಕತೆ ನಡೆಸುತ್ತಿದ್ದರು. ತಮ್ಮದೇ ಕಥೆಗಳ ಬಗೆಗಿನ ವಿಭಿನ್ನ ವಿಮರ್ಶೆಗಳನ್ನು ಪ್ರತಿವಾರ ಕೇಳಬೇಕೆಂದಾಗ ಬರಹಗಾರನಿಗೆ ಅದೆಷ್ಟು ಸಂಯಮವಿರಬೇಕು? ಅಷ್ಟಕ್ಕೂ ಅದು ತಾನು ಬರೆದ ಕಥೆಯೇ ಅಲ್ಲದಿದ್ದರೂ ಅದನ್ನು ಟೀಕಿಸದೆ ಎಲ್ಲವನ್ನೂ ನಗುಮೊಗದಿಂದ ಸ್ವೀಕರಿಸಬೇಕು. ಎಲ್ಲರ ಬೆನ್ನು ತಟ್ಟಬೇಕು. ಅಥವಾ ನಾನು ಹೀಗೂ ಬರೆದಿರಬಹುದೇ ಎಂದು ತನ್ನದೇ ಬರಹವನ್ನು ಮೆಚ್ಚಿಕೊಳ್ಳಬೇಕು. ಸಾಹಿತಿಗಳ ಬದುಕು ಕೂಡ ಒಮ್ಮೊಮ್ಮೆ ಎಂತಹ ವಿರೋಧಾಭಾಸಗಳ ಆಗರ ಅಂದುಕೊಂಡೆ.

ತಮ್ಮ ಬರಹಗಳನ್ನು ಓದದೇ ಅವರನ್ನು ಸನ್ಮಾನಿಸಲು ಮುಂದಾಗುವ ಹಲವಾರು ಆಯೋಜಕರು, ಕಥೆಗಾರರ ಕಥೆಯನ್ನು ಓದದೆ ಅವರ ಸೆಲೆಬ್ರಿಟಿ ಸ್ಟೇಟಸ್ಸನ್ನು ನೋಡಲು ನೆರೆವ ಸಭಿಕರು, ಅವರ ಪುಸ್ತಕಗಳನ್ನು ಅರ್ಥ ಮಾಡಕೊಳ್ಳದೆ ಅದನ್ನು ವಿಮರ್ಶಿಸಲು ಮುಂದಾಗುವ ವಿಮರ್ಶಕರು ಇವರನ್ನೆಲ್ಲ ಗಂಟೆಗಟ್ಟಲೆ ಕೂತು ಸಹಿಸಿಕೊಳ್ಳುವ ಸಾಹಿತಿ ಮಹಾಶಯರ ಬಗ್ಗೆ ಮರುಕವನ್ನಿಸಿತು.

ಇವರ ಬರಹದ ಹಿಂದಿನ ಉದ್ದೇಶಗಳನ್ನು ನೇರವಾಗಿ ಹೇಳಿದರೆ ಬಹುಶಃ ಅಲ್ಲಿ ನೆರೆದಿದ್ದವರಿಗೆ ತಮ್ಮ ನಂಬಿಕೆಗಳ ಬುಡ ಅಲ್ಲಾಡಿಹೋದ ಹಾಗಾಗಬಹುದು. ಈ ಕಾರ್ಯಕ್ರಮವನ್ನು ಆಯೋಜಿಸಿದ್ದವರಿಗೆ ಕಥೆಗಾರನ ಬಗೆಗಿದ್ದ ವಿಚಾರವಂತರ ಆಕ್ಷೇಪಣೆ ಯಾವ ಲೆಕ್ಕಕ್ಕೂ ಇದ್ದಂತಿರಲಿಲ್ಲ. ಬಹುಶಃ ವಿಚಾರವಂತರೇ ಭ್ರಷ್ಟರು ಮತ್ತು ದುಷ್ಟರು ಎಂದು ಕರೆಸಿಕೊಳ್ಳುವಂತ ಕಾಲವಿದು. ಪೋಲ್ಯಾಂಡ್ ದೇಶವನ್ನು ಜರ್ಮನ್ನರು ದಾಸ್ಯಕ್ಕೆ ತೆಗೆದುಕೊಳ್ಳುವಾಗ ಮೊದಲು ಮಾಡಿದ್ದೆಂದರೆ, ಪೋಲ್ಯಾಂಡಿನಲ್ಲಿ ಇದ್ದ ಎಲ್ಲ ಪ್ರೊಫೆಸರುಗಳನ್ನ, ಚಿಂತಕರನ್ನ, ವಿಚಾರಮಾಡಬಲ್ಲವರನ್ನ ದೇಶದ್ರೋಹಿಗಳ ಹೆಸರಲ್ಲಿ ಬಂಧಿಸಿದ್ದು. ಸಮಾಜದಲ್ಲಿ ಚಿಂತ ಮಾಡಬಲ್ಲವರೆಲ್ಲ ಖಾಲಿಯಾದ ನಂತರ ಉಳಿದವರ ಕಶೇರುಕಗಳನ್ನು ಗೂನಾಗಿಸಕೊಳ್ಳುವುದು ಅತ್ಯಂತ ಸುಲಭವಾಗಿತ್ತು. ಜರ್ಮನ್ನರ ದಬ್ಬಾಳಿಕೆ ನಡೆಸಿದ ಎಲ್ಲ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿದ್ದ ಪ್ರೊಫೆಸರ್‌ಗಳು ಹೀನಾಯ ಸ್ಥಿತಿಯಲ್ಲಿ ಸತ್ತದ್ದನ್ನು ಪ್ರತಿ ವಿಶ್ವವಿದ್ಯಾನಿಲಯಗಳು ಇವತ್ತು ಅಲ್ಲಿಗೆ ಬರುವ ಪ್ರತಿ ಸಂದರ್ಶಕರಿಗೆ ತಿಳಿಸುತ್ತ ವಿಚಿತ್ರ ವೇದನೆಯನ್ನ ಪಡುವುದನ್ನ ಅಲ್ಲಿಗೆ ಹೋದಾಗ ಕಣ್ಣಾರೆ ನೋಡಿದ್ದೆ.

ಪ್ರಪಂಚವನ್ನೆಲ್ಲ ಸುತ್ತಿ ಬರಲು ಶುರುವಾಗುತ್ತಿದ್ದ ನನ್ನ ಯಾದೃಚ್ಛಿಕ ಚಿಂತನೆಗಳನ್ನು ತಡೆದು ನಿಲ್ಲಿಸಲು ಪ್ರಯತ್ನಿಸಿದೆ. ಅದಕ್ಕೂ ಇದಕ್ಕೂ ಯಾವ ತಾಳೆಯೂ ಇರಲಿಲ್ಲ. ಸಾಮಾನ್ಯ ಮನುಷ್ಯನಾದ ನನ್ನ ಮೆದುಳು ಹೀಗೇಕೆ ಯೋಚಿಸಿತು ಎನ್ನವುದನ್ನು ಎಷ್ಟೇ ಯೋಚಿಸಿದರೂ ತಾಳೆ ಹಾಕಲಾಗದೆ ಸೋತೆ.

ನಾನು ಹೇಳಬೇಕಾದ್ದನ್ನು ನನ್ನಂತಹುದೇ ಅಭಿಪ್ರಾಯ ಹೊತ್ತು ಕೂತ ಇತರೆ ಹಲವರು ಸಭಿಕರಿಗೆ ಪರೋಕ್ಷವಾಗಿಯಾದರೂ ತಿಳಿಸಬಹುದೇನೋ? ಕನಿಷ್ಠ ಪಕ್ಷ ಬರೆದವರಿಗೆ ಈ ಬಗ್ಗೆ ತಿಳಿದರೆ ಸಾಕು ಎಂದು ಅಂದುಕೊಂಡೆ.

ಅಷ್ಟರಲ್ಲಿ ಮೂರನೆಯವ ತನ್ನ ನಾಲ್ಕನೆಯ ಹಾಳೆಯಲ್ಲಿ ಬರೆದು ತಂದಿದ್ದ ವಿಮರ್ಶೆಯನ್ನು ಓದುತ್ತಿದ್ದ. ವಿಶ್ವವ್ಯಾಪಿ ಚಿಂತಕನೆಂದು ಸಾಹಿತಿಯನ್ನು



ಅಟ್ಟಕ್ಕೇರಿಸುತ್ತಿದ್ದ.

ನನಗೆ ಪಿಸುಮಾತಿನಲ್ಲಿ ಕರೆ ಬಂತು. ನನ್ನ ನಂತರ ಮಾತಾಡಲು ತಯಾರಾಗಿ ಬಂದಿದ್ದ ಮತ್ತೊಬ್ಬ ಮಹಿಳೆಯೂ ಅಲ್ಲಿದ್ದಳು.

ಮೊದಲು ಮಾತಾಡಿದ್ದ ಆಯೋಜಕ ಮಿಕ್ಕ ಮೂವರು ಭಾಷಣಕಾರರು ತುಂಬ ಸಮಯ ತಗೊಂಡರೆಂತಲೂ ಇದೀಗ ನಾವಿಬ್ಬರೂ ಎರಡು ಮೂರು ನಿಮಿಷದೊಳಗಾಗಿ ನಮ್ಮ ಮಾತನ್ನು ಮುಗಿಸಬೇಕೆಂದೂ ತಾಕೀತು ಮಾಡಿದ. ಜನರ ಸಹನೆ ಕಟ್ಟೆಯೊಡೆದು ಅವರೆಲ್ಲ ಎದ್ದುಹೋಗುವ ಮುನ್ನ ಅತಿಥಿಗಳು ಮಾತಾಡಲು ಸಮಯ ಬೇಕೆಂತಲೂ, ಅವರು ಬಾಡಿಗೆ ತಗೊಂಡ ಸಭಾಂಗಣವನ್ನು ಸಂಜೆ 6ಕ್ಕೆ ಮತ್ತೊಬ್ಬರು ಉಪಯೋಗಿಸುತ್ತಿದ್ದಾರೆಂದೂ ಅಲವತ್ತುಕೊಂಡ. ಧರ್ಮಸಂಕಟಕ್ಕೆ ಬಿದ್ದೆ.

'ಹೋಗಲಿ ಬಿಡಿ. ನನ್ನ ನಂತರದವರು ಮಾತಾಡಲಿ, ನಾನು ಮಾತನಾಡುವುದಿಲ್ಲ' ಎಂಬ ಪುಕ್ಕಟೆ ಉದಾರತೆಯನ್ನು ತೋರಿಸಿದೆ.

'ಹಾಗೆಂದರೆ ಹೇಗೆ ಸಾರ್... ನೀವು ಚೆನ್ನಾಗಿ ಮಾತಾಡ್ತೀರಿ ಅಂತಲೇ ನಿಮ್ಮನ್ನು ಕರೆಸಿದ್ದೇವೆ, ಹಾರ ತುರಾಯಿ ಎಲ್ಲ ತಂದಿದ್ದೇವೆ, ನೀವೂ ಮಾತಾಡಿ ಸಾರ್' ಅಂತ ದುಂಬಾಲು ಬಿದ್ದ.

ನಾನು ಆರಿಸಿಕೊಂಡ ಕಾದಂಬರಿಯ ಕಥೆ ಬಹಳ ದೊಡ್ಡದು. ಇನ್ನೂರು ಪುಟಗಳಿಗಿಂತ ಹೆಚ್ಚನದನ್ನು ಎರಡು ನಿಮಿಷದಲ್ಲಿ ಹೇಗೆ ಹೇಳುವುದು? ಏನಂತ ಹೇಳುವುದು. ನನಗಿಂತ ಮೊದಲಿನವರು ಹತ್ತು ನಿಮಿಷ ಮಾತಾಡುತ್ತೇವೆಂದು ವೇದಿಕೆ ಹತ್ತಿದವರು ಮೂವತ್ತು ನಿಮಿಷವಾದರೂ ಮೈಕ್ ಬಿಡದೆ ಕೊರೆದು ಹೋಗಿದ್ದರು. ಅಪ್ಪಿ ತಪ್ಪಿಯೂ ಸಭಿಕರ ಮೇಲೆ ಇನ್ನೂ ಹೆಚ್ಚಿನ ಒತ್ತಡವನ್ನು ಹೇರಲು ನಾನು ತಯಾರಿರಲಿಲ್ಲ. ಇದೀಗ ನನ್ನ ಮನಸ್ಸು ಪುಸ್ತಕ ವಿಮರ್ಶೆಯನ್ನು ಬಿಟ್ಟು, ಬಂದ ಸಂದರ್ಭವನ್ನ ಹೇಗೆ ನಿಭಾಯಿಸಿದರೆ ಉತ್ತಮ ಅಂತ್ಯವನ್ನು ನೀಡಬಹುದು ಎನ್ನುವ ಬಗ್ಗೆ ಯೋಚಿಸಲು ಶುರುಮಾಡಿತು.

ಉಪಾಯ ಹೊಳೆಯಿತು. ಮೈಕನ್ನು ಕೈಗೆತ್ತಿಕೊಂಡೆ.

ಪುಸ್ತಕದ ಅಂತ್ಯದಿಂದ ಶುರುಮಾಡಿದೆ. ಯಾವ ರೀತಿಯ ಕಟಕಿಯಾಡಬೇಕೆಂಬ ಉದ್ದೇಶವೂ ನನ್ನಲ್ಲಿರಲಿಲ್ಲ. ಯಾರನ್ನೂ ನೋಯಿಸುವ ಉದ್ದೇಶದಿಂದ ನಾನು ಇಲ್ಲಿಗೆ ಬಂದವನಲ್ಲ. ಹಾಗಾಗಿ ಪುಸ್ತಕದ ನೈತಿಕ ನಿರ್ಗಮನದ ಬಗ್ಗೆ ಪ್ರಶ್ನೆ ಕೇಳಿದೆ. ಉತ್ತರ ಬಯಸಲಿಲ್ಲ. ಊಟದ ನಂತರ ಬಾಯಲ್ಲಿ ಉಳಿಯುವ ಕೊನೇ ರುಚಿಯಂತೆ ಕಥೆಯೊಂದರ ಅಂತ್ಯವೇ ಮನಸ್ಸಲ್ಲಿ ಉಳಿಯುವುದರ ಬಗ್ಗೆ ಮಾತಾಡಿದೆ. ಇತ್ತೀಚೆಗಿನ ವೈಜ್ಞಾನಿಕ ಪುಸ್ತಕವನ್ನು ಉದಾಹರಣೆಯನ್ನಾಗಿ ಕೊಟ್ಟು ಎರಡರ ವ್ಯತ್ಯಾಸ ಹೇಳಿದೆ. ನನ್ನ ಸಂದೇಶ ಸಾಹಿತಿಯನ್ನು ಮುಟ್ಟಿತ್ತು. ಅವನ ಪಟಾಲಂಗಳು 'ಹೆ.. ಹೆ.. ಹೆ..' ಅಂತ ಪೆಚ್ಚು ನಗೆ ನಕ್ಕರು. ಏನೂ ಅರ್ಥವಾಗದ ಸಭಿಕರು ನನ್ನ ಕೈಬಾಯಿ ತಿರುಗುತ್ತಿದ್ದ ರೀತಿಗೆ, ನಿರರ್ಗಳ ಮಾತಿಗೆ ಅಂಕಕೊಟ್ಟು ಜೋರಾಗಿ ಚಪ್ಪಾಳೆ ತಟ್ಟಿದರು. ಅಥವಾ ಹಾಗಂತ ನಾನು ಅಂದುಕೊಂಡೆ.

ನಂತರದ ತನ್ನ ಭಾಷಣದಲ್ಲಿ ಕಥೆಯ ಅಂತ್ಯ ಅದೆಷ್ಟು ಕಷ್ಟ ಅಂತೇನೋ ಹೇಳುತ್ತಿದ್ದ ಸಾಹಿತಿಯ ಮಾತುಗಳನ್ನು ನಾನು ಸಾರಾಸಗಟಾಗಿ ತಳ್ಳಿಹಾಕಿದೆ. ಪೂರ್ತಿ ಸೃಷ್ಟಿಯಾಗುವ ಕಥೆಯೊಂದರ ಅಂತ್ಯಕ್ಕೆ ಕರ್ತೃವಿನ ಬಳುವಳಿ ಮುಖ್ಯವೇ ಹೊರತು 'ಕಥೆ' ಆತನ ಕೈ ಹಿಂಡುವುದಿಲ್ಲ ಎನ್ನುವ ವಿಚಾರ ಯಾರಿಗೆ ತಿಳಿದಿಲ್ಲ?

ವಿಚಾರವಂತಿಕೆಯನ್ನೇ ಕುಬ್ಜವಾಗಿಸಿ, ಸೃಷ್ಟಿ ಮತ್ತು ಸಮಾಜದಲ್ಲಿ ಭೇದ–ಭಾವ ಎಣಿಸುವುದು ಬರಹಗಾರನ ಮಿತಿಯೇ ಹೊರತು ಜೀವನ ಅಥವಾ ಜೀವಿಗಳ ಮಿತಿಯಲ್ಲ.ಆತನ ಬರಹದ ಬದುಕು ಈ ರೀತಿಯಲ್ಲಿ ಮೊಟಕಾದ ಅಂತ್ಯಕ್ಕೂ ಕಥೆಗಾರನೇ ಹೊಣೆಗಾರ, ಓದುಗನಲ್ಲ.

ಅಷ್ಟರಲ್ಲಿ ರಾಜೇಶ ಕಣ್ಣಿಗೆ ಬಿದ್ದ. ನನ್ನ ಭಾಷಣ ಶುರುವಾಗುವ ಹೊತ್ತಿಗೆ ಬಂದಿದ್ದನಂತೆ. ಗೆಳೆಯನನ್ನು ಭೇಟಿಮಾಡಲು ಪ್ರಯತ್ನ ಪಟ್ಟು ತಡವಾದರೂ ಚಿಂತೆಯಿಲ್ಲ ಅಂತ ಬಂದೇ ಬಿಟ್ಟಿದ್ದ. ನನ್ನ ಮತ್ತು ಅವನ ಪ್ರಯತ್ನಗಳು ತಡವಾಗಿಯಾದರೂ ಒಟ್ಟಿಗೇ ಫಲಿಸಿದ್ದವು.

ಅವನೊಡನೆ ಕೂತು ಮತ್ತೊಂದು ಸ್ಟ್ರಾಂಗ್ ಕಾಫಿ ಹೀರಲು ಎದ್ದು ಹೊರಟೆ.